ದಿನಾಂಕ 29.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಶ್ರೀ.ಎಂ.ಜಿ.ಆರ್. ವಕೀಲರಿಂದಃ-

ನನಗೆ ತಿಮ್ಮಯ್ಯರವರು 1974-1975 ನೇ ಇಸವಿಯಿಂದ ಪರಿಚಯವಿದ್ದರು. ನಾನು 1974-75 ನೇ ಇಸವಿಯಲ್ಲಿ ಗೋಣಿಕೊಪ್ಪದ ಸಹಕಾರ ಮಾರಾಟ ಸಂಘದ ಅಕ್ಕಿ ಗಿರಣಿ ವಿಭಾಗದ ಮೇಲ್ವಿಚಾರಕನಾಗಿದ್ದು, ತಿಮ್ಮಯ್ಯರವರು ಭತ್ತದ ವ್ಯಾಪಾರಿಯಾಗಿದ್ದು, ನಮ್ಮ ಗಿರಣಿಗೆ ಆಗಾಗ್ಗೆ ಬರುತ್ತಿದುದ್ದರಿಂದ ನನಗೆ ಪರಿಚಯವಾಗಿದ್ದರು. ಬಳಿಕ ನಾನು ಅವರ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದೆನು. ತಿಮ್ಮಯ್ಯವರಿಗೆ ಒಟ್ಟು ಆಸ್ತಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ತಿಮ್ಮಯ್ಯರವರು ನನ್ನ ಬಳಿ ಅವರ ಮನೆಯ ವಿಚಾರಗಳನ್ನು ಮಾತಾನಾಡುತ್ತಿದ್ದರು. ವ್ಯವಸಾಯಕ್ಕೆ ಸಂಬಂಧಿಸಿದ ವಿಚಾರಗಳನ್ನು ನನ್ನ ಬಳಿ ಮಾತಾನಾಡುತ್ತಿದ್ದರು. ನಾನು ಸಹ ನಮ್ಮ ಮನೆಯ ವಿಚಾರಗಳನ್ನು ಅವರ ಬಳಿ ಚರ್ಚಿಸುತ್ತಿದ್ದೆನು.

ನಾನು ನಿಶಾನೆ ಡಿ. 16,29, 32 ಮತ್ತು 33 ದಾಖಲೆಗಳಿಗೆ ತಿಮ್ಮಯ್ಯರವರ ಮನೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ಸದರಿ ದಾಖಲೆಗಳಿಗೆ ಬೇರೆ ದಿನಾಂಕಗಳಂದು ಸಹಿ ಮಾಡಿರುತ್ತೇನೆ. ಒಂದೆರಡು ದಾಖಲೆಗಳನ್ನು ನನ್ನ ಸಮಕ್ಷಮ ತಿಮ್ಮಯ್ಯರವರು ತಯಾರು ಮಾಡಿದ್ದು, ಕೆಲವು ದಾಖಲೆಗಳನ್ನು ತಯಾರಿಸಿ ಸಹಿ ಮಾಡಲು ನನಗೆ ನೀಡಿದ್ದು, ನಾನು ಅವುಗಳನ್ನು ಓದಿ ಸಹಿ ಮಾಡಿರುತ್ತೇನೆ. ತಿಮ್ಮಯ್ಯರವರು ಮೃತರಾದ ಪ್ರಾರಂಭದ ದಿನಗಳಲ್ಲಿ ನಾನು ಅವರ ಮನೆಗೆ ಹೋಗಿ ಬರುತ್ತಿದ್ದೆನು. ನಂತರ ಅವರ ಮಕ್ಕಳು ಕರೆದಾಗ ಮಾತ್ರ ಹೋಗುತ್ತಿದ್ದೆನು. ತಿಮ್ಮಯ್ಯರವರು ಮೃತರಾದ 1 ವರ್ಷದ ನಂತರ ನಾನು ಅವರ ತೋಟದ ಮನೆಗೆ ಹೋಗಿರುವುದಿಲ್ಲ. ನಾನು ತಿಮ್ಮಯ್ಯರವರ ಮನೆಗೆ ಹೋದ ಸಂದರ್ಭದಲ್ಲಿ ವಾದಿಯು ಕೆಲವೊಮ್ಮೆ ಇರುತ್ತಿದ್ದರು. ಆಗ ಅವರು ನನಗೆ ಸ್ವಲ್ಪ ಪರಿಚಯವಾಗಿದ್ದರು. ತಿಮ್ಮಯ್ಯರವರು ಮೃತರಾಗುವುದಕ್ಕಿಂತ ಪೂರ್ವದಲ್ಲಿ ವಾದಿಯ ಜೊತೆ ಅವರಿಗೆ ಮನಸ್ತಾಪ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ತನ್ನ ತಂದೆ ತಿಮ್ಮಯ್ಯರವರು ಮೃತರಾದಾಗ ಬಂದಿದ್ದರು. ಅಂತ್ಯಕ್ರಿಯೆ ಮುಗಿದ

ಮರುದಿವಸವು ಸಹ ಅವರು ಇದ್ದರು. ನಾನು 11 ನೇ ದಿನದ ಕಾರ್ಯಕ್ಕೆ ಹೋಗಿರಲಿಲ್ಲ. ತಿಮ್ಮಯ್ಯರವರು ತಮ್ಮ ಹಣಕಾಸಿನ ವಿಚಾರಗಳನ್ನು ನನ್ನ ಬಳಿ ಚರ್ಚಿಸುತ್ತಿರಲಿಲ್ಲ. ತಿಮ್ಮಯ್ಯರವರು ಕಮಲರವರಿಗೆ ಆಸ್ತಿಯನ್ನು ಕೊಡುತ್ತೇನೆಂದು ನನ್ನ ಬಳಿ ಹೇಳಿದ್ದರು. ತಿಮ್ಮಯ್ಯರವರು 3 ನೇ ಪ್ರತಿವಾದಿಯ ತಂದೆಗೆ 5 ಎಕರೆ 74 ಸೆಂಟ್ಸ್ ಜಮೀನನ್ನು ಮಾರಾಟ ಮಾಡಲು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿದ್ದ ವಿಚಾರ ನನಗೆ ತಿಳಿಸಿದ್ದರು. ಕ್ರಯದ ಕರಾರುಪತ್ರವನ್ನು ಯಾವ ದಿನಾಂಕದಂದು ಬರೆದುಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ. ಕರಾರುಪತ್ರದ ಪ್ರಕಾರ ಕ್ರಯಪತ್ರವನ್ನು ಬರೆದುಕೊಡುವ ಮೊದಲೇ ತಿಮ್ಮಯ್ಯರವರು ಮೃತರಾದರು. ತಿಮ್ಮಯ್ಯರವರು ಮೃತರಾದ ಬಳಿಕ ಅವರ ಪತ್ನಿ ಮತ್ತು 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಯ ತಂದೆಗೆ ಕ್ರಯಪತ್ರ ಬರೆದುಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ನಿಶಾನೆ ಡಿ. 16,29, 32 ಮತ್ತು 33 ದಾಖಲೆಗಳ ಒಕ್ಕಣೆಗಳ ಬಗ್ಗೆ ನನಗೆ ಏನು ಇಲ್ಲದೇ ಗೊತ್ತಿದ್ದರೂ ಸಹ ತಿಮ್ಮಯ್ಯರವರು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಶಾನೆ ಡಿ. 16, 29 ಮತ್ತು 33 ದಾಖಲೆಗಳಿಗೆ ವಾದಿಯು ತನ್ನ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ. 16 ದಾಖಲೆಗೆ ವಾದಿಯ ಗಂಡನು ಸಹ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>**-** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.